


ನಿರ್ದೇಶಕ: 'ಸಾಲಗಳಿಗೆ ಅಂಜದಿರಿ' ಅನ್ನೋ ಸಿನಿಮಾ ತೆಗೆಯೋಣ ಅಂತ ಇದ್ದೀನಿ. ಅದಕ್ಕೆ ಒಂದು ಪಂಚಿಂಗ್ ಟ್ಯಾಗ್ ಲೈನ್ ಬೇಕಿತ್ತು. ಅದಕ್ಕೆ ನೀನೇ ಸೂಕ್ತ. ಒಂದ್ ಡೈಲಾಗ್ ಹೇಳು?
ನಿರ್ದೇಶಕನ ಮಿತ್ರ: ಪಂಚಿಂಗ್ ಟ್ಯಾಗ್ ಲೈನ್ ಬೇಕಾ? ಒರ್ಕೊ 'ಸಾಲಗಳಿಗೆ ಸಿಲುಕಿ ಹಲ್ಗಿಂಜದಿರಿ'.

***

ನಂಜ: ಏನೋ ಮಂಜ, ಮದುವೆ ಫಿಕ್ಸ್ ಆಯ್ತಾ?
ಮಂಜ: ಫಿಕ್ಸ್ ಆಯ್ತಾ ಅಂತ ಯಾಕ್ ಕೇಳ್ತಿಯಾ? ಸೆಟ್ ಆಯ್ತಾ ಅಂತ ಕೇಳ್ಬಾರ್ದಾ?
ನಂಜ: ಯಾಕಂದ್ರೆ ಮದುವೆ ಆದ್ಮೇಲೆ ಅತ್ತಿತ್ತ ಅಲ್ಲಾಡಂಗಿಲ್ವಲ್ಲ. ಅದ್ಕೆ ಹಾಗೇ ಕೇಳ್ದೆ.

***

ಮಂಜ: 'ಮದ್ವೆ ಮಾಡಿದ್ರೆ ಮಗ ಸರಿ ಹೋಗ್ತಾನೆ' ಅಂತ ನಿನ್ ಮಾತ್ ಕೇಳಿ ಮದ್ವೆ ಮಾಡ್ದೆ.
ನಂಜ: ಈಗ ಆಗಬಾರದ್ದು ಏನಾಯ್ತು?
ಮಂಜ: ಮೊದ್ಲು ಫ್ರೆಂಡ್ಸ್ ಹಿಂದೆ ಓಡಾಡ್ಕೊಂಡಿದ್ದ. ಈಗ ಹೆಂಡ್ತಿ ಹಿಂದೆ ಓಡಾಡ್ಕಂಡವ್ನೆ!

***

ನಂಜ: ಹೇ... ಮಂಜ ಮಗಾ ಏನ್ಮಾಡ್ತಾನೆ?
ಮಂಜ: ಫುಲ್ ಬ್ಯುಸಿ.
ನಂಜ: ಸಂಬಳ ಎಷ್ಟ್ ತರ್ತಾನೆ?
ಮಂಜ: ಸಂಬಳಾನೂ ಇಲ್ಲ, ಗಿಂಬಳಾನೂ ಇಲ್ಲ
ನಂಜ: ಹಂಗಾದ್ರೆ ಸ್ವಂತ ಬ್ಯುಸಿನೆಸ್ ಇರ್ಬೇಕು. ಪ್ರಾಫಿಟ್ ಎಷ್ಟ್ ಸಿಗುತ್ತೆ?
ಮಂಜ: ಅದೂ ಇಲ್ಲಪ್ಪ.
ನಂಜ: ಮತ್ತೆ ಫುಲ್ ಬ್ಯುಸಿ ಅಂದ್ಯಲ್ಲೋ?
ಮಂಜ: ಅವ್ನು ಯಾವಾಗ್ಲೂ ಫೋನ್‌ನಲ್ಲಿ ಫುಲ್ ಬ್ಯುಸಿ ಇರ್ತಾನೆ. ಅದ್ಕೆ ಫುಲ್ ಬ್ಯುಸಿ ಅಂದೆ!

***

ನಂಜ: ಲೋ ಮಂಜ, ದೊಂಬಿ ಪ್ರಕರಣದಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ಗೃಹಸಚಿವರು ಪುನರುಚ್ಚಾರ ಯಾಕ್ ಮಾಡ್ತವ್ರೆ?
ಮಂಜ: ಒಂದ್ಸಾರಿ ಹೇಳಿದ್ರೆ ಯಾವ್ ಅಧಿಕಾರಿಗಳು ಕೇಳಲ್ವಂತೆ.
ನಂಜ: ಹಂಗಲ್ವೋ, ಆರೋಪಿಗಳು ಎಲ್ಲಿದ್ದಾರೋ ಅಲ್ಲೇ ಸೇಫಾಗಿ ಇರಲಿ ಅಂತ.

***

ನಾಗೇಶ: ದೊಡ್ಡವರೆಲ್ಲಾ ಜಾಣರಲ್ಲ ಅಂತ ಅವರೇಹಾಡ್ಕಂಡವ್ರಲ್ಲ.
ಸಂತೋಷ: ಅದ್ರಲ್ಲೇನು ತಪ್ಪಿಲ್ಲ ಬಿಡೋ.
ನಾಗೇಶ: ಅದ್ಹೇಗೆ?
ಸಂತೋಷ: ನಿನ್ನೆ ಮಿಸ್ ಸೊನ್ನೇನ ಜೀರೊ ಅಂತ ಹೇಳ್ಕೊಟ್ಟೋರು ಇವತ್ತು 'ಓ' ಅಂತ ರಾಗ ಎಳಿತಾರೆ!

***

ನಂಜ: ದುನಿಯಾದಾಗ ಏನೈತೊ ಮಂಜ?
ಮಂಜ: ಸದ್ಯಕ್ಕೆ ಪಕ್ಷಾತೀತವಾಗಿ ಪಿಎಸ್ಐ ಹಗರಣ ಜೋರಾಗೈತೆ!

***

ಸುಮಾ ಯಾವುದೇ ವಿಚಾರ, ಸುದ್ದಿ, ಸಮಾಚಾರ ಇಲ್ಲದಿದ್ದರೂ ನಿತ್ಯವೂ ತನ್ನ ಗೆಳತಿ ಗೀತಾಗೆ ಫೋನ್ ಮಾಡುತ್ತಿದ್ದಳು. ಫೋನ್‌ನಲ್ಲಿ ತನ್ನ ಮೂರು ವರ್ಷದ ಮಗ ಹೇಮಂತನ ತುಂಟಾಟಗಳನ್ನು, ವೀರಗಾಥೆಯ ಹಾಗೆ ವರ್ಣಿಸುತ್ತಿದ್ದಳು. ಹಾಗೆ ಹೇಳದ ದಿನ ಆಕೆಗೆ ಏನನ್ನೋ ಕಳೆದುಕೊಂಡ ಭಾವ ಕಾಡುತ್ತಿತ್ತು. ಎಂದಿನಂತೆ ಫೋನ್ ಮಾಡಿದ ಸುಮಾ 'ನನ್ ಮಗ ಬಲ್ ನನ್ಮಗ ಕಣೆ. ಮೂರು ವರ್ಷಕ್ಕೆ ಎಬಿಸಿಡಿನ ಜೆಡ್‌ವರ್ಗೂ ತಪ್ಪಿಲ್ಲದೆ ಹೇಳ್ತಾನೆ'. ಅದಕ್ಕೆ ಪ್ರತಿಯಾಗಿ ಗೀತಾ, 'ಬಿಗ್ ಲೆಟರ್ಸ್ ಹೇಳ್ತಾನೋ, ಸ್ಮಾಲ್ ಲೆಟರ್ಸ್ ಹೇಳ್ತಾನೋ'?

ವೇದಿಕೆ ಮೇಲೆ ಮಂಜುಸ್ವಾಮಿ ಭಾಷಣ!
ಮಂಜುಸ್ವಾಮಿ: ಎಲ್ಲರೂ ಮದುವೆ ಆಗುತ್ತಾರೆ ಅನ್ನುವ ಕಾರಣಕ್ಕೆ ನೀವು ಮದುವೆ ಆಗಬೇಡಿ. ಹೆಂಡತಿ ಮಕ್ಕಳನ್ನು ಸಾಕಿ ಸಲಹುವ ಶಕ್ತಿಯುಳ್ಳವರು ಮಾತ್ರ ಮದುವೆ ಆಗಿ.
ಭಾಷಣ ಕೇಳುತ್ತಿದ್ದ ನಂಜುಸ್ವಾಮಿ: 'ಹೆಣ್ಣು–ಗಂಡು ಅಂತ ಬೇಧ ಮಾಡ್ಬೇಡಿ ಸುಮ್ಕಿರಿ ಮಂಜುಸ್ವಾಮಿ!
ಮಂಜುಸ್ವಾಮಿ: ನಾನು ಹೇಳಿದ್ದನ್ನು ಯಾವ ರೀತಿ ಅರ್ಥ ಮಾಡ್ಕೊಂಡಯ್ಯ?
ನಂಜುಸ್ವಾಮಿ: ಹೆಂಡ್ತಿ–ಮಕ್ಕಳನ್ನು ಗಂಡನಾದ್ರೂ ಸಾಕ್ಲಿ, ಗಂಡ ಮಕ್ಕಳನ್ನು ಹೆಂಡ್ತಿನಾದ್ರೂ ಸಾಕ್ಲಿ. ನಿಮ್ದೇನು ಸೆಂಟ್ರಲ್ಲಿ?

ಸಂಗ್ರಹ: ಮಲ್ಲಿಕಾರ್ಜುನ, ಸುರಧೇನುಪುರ


